ಸರ್... ನಾನು ಅಸಿಸ್ಟೆಂಟ್ ಎಂಜಿನಿಯರ್ ಇದ್ದಾಗಿನಿಂದಲೂ ಇವರದು ಇದೇ ಗೋಳು... ಆ ಕಡೆ ಥಿಕ್ ಫಾರೆಸ್ಟ್ ಇದೆ ಸರ್, ಕಾಡುಮೃಗಗಳ ಕಾಟ ಬೇರೆ... ಗಾಡಿಯಲ್ಲಿ ತಮ್ಮ ಫ್ಯಾಮಿಲಿ ಮೆಂಬರ್ಸ್ಎಲ್ಲಾ ಇದಾರೆ...' ಎಂದು ಕಾಲೆಳೆದರು ಸೂಪರಿಂಟೆಂಡಿಂಗ್ ಎಂಜಿನಿಯರ್. ಆದರೆ, 'ಪಾಪ, ಕಾಡಲ್ಲಿ ವಾಸಮಾಡ್ತಾರೆ... ಅವರೂ ನಮ್ಮಂಗೆ ಮನುಷ್ಯರಲ್ಲವೇನ್ರೀ... ಅವರ ಮನೆಯಲ್ಲೂ ಹೆಣ್ಣುಮಕ್ಕಳಿರ್ತಾರಲ್ವ?...' ಎಂದಂದು ಎಲ್ಲರ ಬಾಯಿ ಮುಚ್ಚಿಸಿ ಹೊರಟೇಬಿಟ್ಟರು.

ಕತ್ತಲೆಯ ಗರ್ಭವನ್ನು ಸೀಳಿ ಕಾರುಗಳು ಬಂಡಿ ಜಾಡಿನಲ್ಲಿ ದ್ವೀಪದತ್ತ ನುಗ್ಗಿದವು. ರಸ್ತೆ ಮುಗಿದು ನೀರು ನಿಂತ ಜಾಗಕ್ಕೆ ಬಂದ ಗಾಡಿಗಳೆಲ್ಲ ಗಕ್ಕನೆ ಬ್ರೇಕ್ ಹಾಕಿಕೊಂಡು ನಿಂತವು. ದಡದಡನೇ ಇಳಿದುಬಂದ ಯುವಕರು ನೀರಿನಾಚೆಯ ತಮ್ಮ ಊರನ್ನು ತೋರಿಸಿದರು. ಕತ್ತಲೆಯಲ್ಲಿ ಏನೂ ಕಾಣುವಂತಿರಲಿಲ್ಲ. ಎಲ್ಲ ಕಾರಿನ ಹೆಡ್‌ಲೈಟುಗಳು ಶಕ್ತಿಮೀರಿ ಬೆಳಕನ್ನು ಪಸರಿಸಿದವು. ಸುತ್ತಲೂ ಅಪಾರವಾದ ಜಲರಾಶಿ. ಇದೊಂದು ಕಡೆ ಮಾತ್ರ ನೀರು ಕಡಿಮೆ ಆವರಿಸಿದೆಯಾದ್ದರಿಂದ, ಇಲ್ಲಿಂದ ಒಂದು ಸಣ್ಣ ಬೋಟನ್ನು ಕೊಡಿಸಿಕೊಟ್ಟರೂ ಸಾಕೆಂಬುದು ಅವರ ಬೇಡಿಕೆಯಾಗಿತ್ತು. ತಕ್ಷಣ ಅವರಿಗೆ, ಕನ್ಯಾಕುಮಾರಿಯ ತುದಿಯಲ್ಲಿ ತಾವು ನಿಂತು ಲಂಕೆಯ ಮೇಲೆ ಬ್ಯಾಟರಿ ಬೆಳಕು ಬಿಟ್ಟಂತೆ ಭಾಸವಾಯಿತು. ಆದರೆ ಇದು ಕೇವಲ ಇನ್ನೂರು ಅಡಿ ದೂರದ್ದು... ಮಳೆಗಾಲದಲ್ಲಿ ಇನ್ನೊಂದು ನೂರು ಅಡಿ ಹೆಚ್ಚಿಗೆ ನೀರು ಒತ್ತರಿಸಿಕೊಳ್ಳಬಹುದಷ್ಟೇ ಎಂದು ಅಂದಾಜಿಸಿದರು.

ಮುಂದೆ ಬಂದ ರತ್ನಾಕರ, 'ಸರ್, ನಮ್ಮೂರಿಗೆ ಒಂದೇ ಒಂದು ಸಣ್ಣ ಬೋಟು ಸಾಕು ಸರ್... ನೂರೈವತ್ತು ಮನೆಗಳಿದಾವೆ ಅಷ್ಟೇ... ನಮಗೆ ಕಾರು, ಬೈಕು ಓಡಾಡಂಗಿಲ್ಲದಿದ್ರೂ ಪರವಾಗಿಲ್ಲ, ಜನ ಓಡಾಡಂಗಾದ್ರೆ ಸಾಕು. ಮಕ್ಕಳು ಶಾಲೆಗೆ ಹೋಗಕ್ಕೆ–ಬರಕ್ಕೆ, ಯಾರಿಗಾದ್ರೂ ಹುಶಾರಿಲ್ಲದಂಗಾದ್ರೆ ಆಸ್ಪತ್ರೆಗೆ ಹೋಗಕ್ಕೆ–ಬರಕ್ಕೆ, ಇನ್ನುಳಿದಂತೆ ಜನಕ್ಕೆ ಬೇಕಾದ ದವಸ ಧಾನ್ಯ ತರೋಂಗಾದ್ರೆ ಅಷ್ಟೇ ಸಾಕು ಸರ್' ಎಂದ.

'ಅಲ್ರೀ, ಒಂದು ಸಣ್ಣ ಲಾಂಚು ಅಂದ್ರೂ ಎಂಟು–ಹತ್ತು ಕೋಟಿ ಬೇಕು. ಮೇಲಾಗಿ ಅದಕ್ಕೊಬ್ಬ ಡ್ರೈವರ್ರು, ಇನ್ನೊಬ್ಬ ಕ್ಲೀನರ್ರು, ಅವರಿಗೆ ಸಂಬಳ... ಇನ್ನು ಡೀಸೆಲ್ಲಿಗೆ, ರಿಪೇರಿಗೆ ಅಂತ ಅವಗವಾಗ ದುಡ್ಡು ಬೇಕು. ಯಾರು ಕೊಡ್ತಾರೆ? ನಿಂತೋಯ್ತು ಅಂದ್ರೆ ಮತ್ತೆ ಹಿಂಗೆ ಸಾಯೋತನಕ ಅರ್ಜಿ ಹಿಡ್ಕಂಡು ಓಡಾಡ್ತಲೇ ಇರ್ತೀರಾ?...' ಎಂದಾಗ ಎಲ್ಲರ ಬಾಯಿಯೂ ಬಂದಾಯಿತು. ತಮ್ಮ ಕನಸು ಇಷ್ಟೊಂದು ಕ್ಷುಲ್ಲಕವಾ, ಇಂಥದಕ್ಕಾಗಿ ತಾವು ಇಷ್ಟೊಂದು ಹೊಡೆದಾಡಬೇಕಾಗಿತ್ತಾ ಎಂದು ತಮ್ಮತಮ್ಮಲ್ಲೇ ಆತ್ಮಾವಲೋಕನ ಮಾಡಿಕೊಳ್ಳುತ್ತ ಮುಖಮುಖ ನೋಡಿಕೊಂಡರು.

'ಇಲ್ಲಿಗೆ ಒಂದು ಬ್ರಿಡ್ಜ್ ಸ್ಯಾಂಕ್ಷನ್ ಮಾಡ್ತೀನಿ. ಅವಾಗ ನಿಮಗೆ ಪದೇ ಪದೇ ಈ ಸಮಸ್ಯೆಗಳಿರಲ್ಲ...' ಅಂದರು. ಎಲ್ಲರೂ 'ಬ್ರಿಡ್ಜಾ?' ಎಂದು ಒಂದೇ ಬಾರಿಗೆ ಅವಾಕ್ಕಾದರು. ಯುವಕರ ಸಂಘದವರಿಗಂತೂ, 'ಇದು ಆಗದೇ ಇರೋ ಕೆಲ್ಸ, ರಾಜಕಾರಿಣಿಗಳಂತೆ ಬರೀ ಭರವಸೆ ಕೊಡ್ತೌರೆ' ಅನ್ನಿಸಿದರೆ, ಕೆಳಗಿನ ಅಧಿಕಾರಿ, 'ಬ್ರಿಡ್ಜ್‌ಗೆ ತುಂಬಾ ದುಡ್ಡು ಬೇಕಾಗುತ್ತಲ್ವ ಸಾರ್? ಬಜೆಟ್ ಪ್ರಾವಿಜನ್ ಬೇರೆ ಅಷ್ಟೊಂದಿಲ್ಲ...' ಎಂದು ರಾಗ ತೆಗೆದರು.

'ರ್ರೀ, ಬ್ರಿಡ್ಜ್ ಅಂದರೆ ಕಾಂಕ್ರೀಟ್ ಬ್ರಿಡ್ಜೇ ಆಗಬೇಕೇನ್ರೀ. ಎಂಜಿನಿಯರ‍್ರಾಗಿ ನೀವೂ ಹಂಗೇ ಯೋಚಿಸ್ತೀರಪ್ಪ. ಅವರಿಗೆ ನಿಜವಾಗಲೂ ಅವಶ್ಯಕತೆಯಿದೆ ಕಣ್ರೀ. ಇಲ್ಲ ಅಂದ್ರೆ ಯಾಕೆ ಇಪ್ಪತ್ತು–ಮುವತ್ತು ವರ್ಷದಿಂದ ಹಿಂಗೆ ಅರ್ಜಿ ಹಿಡಿದುಕೊಂಡು ಅಲೆದಾಡ್ತಿದ್ರು ಹೇಳ್ರೀ...' ಎಂದು ಬೈದು, 'ಯಾವಾಗಲೂ ಪಾಸಿಟೀವ್ ಮೈಂಡ್ ಇರಬೇಕ್ರೀ. ಲಂಕೆಗೆ ರಾಮ ಹೆಂಗೆ ಸೇತುವೆ ಕಟ್ಟಿದ ಹೇಳಿ?... ಲೋಕಲ್ಲಾಗಿ ಸಿಗೋ ವಸ್ತುಗಳಿಂದಲೇ ಕಟ್ಟಿದ್ರೆ ಕಾಸ್ಟ್ ಕಮ್ಮಿ ಆಗುತ್ತೆ. ಈ ಊರಿನ ಜನಕ್ಕೆ ಓಡಾಡಕ್ಕೆ ಒಂದು ರಸ್ತೆ ಬೇಕು ಅಷ್ಟೆ. ಇಲ್ಲಿ ಟ್ರಾಫಿಕ್ ಡೆನ್ಸಿಟಿನೂ ಇಲ್ಲ. ಮುಂದಿನ ಮುವತ್ತು ವರ್ಷಕ್ಕೆ ಪ್ಲಾನ್